# ರಾಂಪುರದ ಬಕ್ಕಪ್ಪನವರ ತತ್ವಪದಗಳ ಆಶಯ

ಮಮತಾ ಧನರಾಜ*

DOI: https://doi.org/10.5281/zenodo.21793809

**ABSTRACT**

ಕನ್ನಡ ನಾಡಿನಲ್ಲಿ ಇಂದಿಗೂ ಜೀವಂತ ಪರಂಪರೆಯಾಗಿರುವ ತತ್ವಪದಗಳು ಒಂದು ಭಿನ್ನ ಜೀವನ ಕ್ರಮವೂ ಹೌದು. ಕನ್ನಡದ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಬಹುತ್ವವನ್ನು ಪ್ರತಿಫಲಿಸುವ ರೀತಿಯಲ್ಲಿ ತತ್ವಪದಕಾರರು ಎಲ್ಲಾ ಸ್ತರದಿಂದ ಬಂದವರಾಗಿದ್ದಾರೆ. ನಾಡಿನ ಉದ್ದಗಲಕ್ಕೂ ಇರುವ ಪರಂಪರೆಯ ವಿಸ್ತಾರವಾದ ಅಧ್ಯಯನ ಅನೇಕ ಸಾಂಸ್ಕೃತಿಕ ಹೊಳಹುಗಳನ್ನು ನೀಡಬಲ್ಲದು. ಕನ್ನಡ ಸಾಹಿತ್ಯ ದಾಖಲೆಗೊಂಡ ಇತಿಹಾಸದಲ್ಲಿ ಅತ್ಯಂತ ವಿಸ್ತಾರವಾದ ಭಾಗವೆಂದರೆ ತತ್ವಪದಗಳೇ ಆಗಿವೆ. ಈ ಪ್ರಮಾಣದಲ್ಲಿ ಕನ್ನಡ ಸಾಹಿತ್ಯದ ಯಾವ ಪ್ರಕಾರದಲ್ಲಿಯೂ ಸಾಹಿತ್ಯ ಸೃಷ್ಟಿಯಾಗಿಲ್ಲ. ಆದರೆ ಸಾಹಿತ್ಯದ ಚರಿತ್ರೆಯಲ್ಲಿ ತತ್ವಪದಗಳ ಏಕತಾರಿಯನ್ನು ಇಂದಿಗೂ ಹೊರಗೆ ಇಟ್ಟಿದ್ದಾರೆ. ಕನ್ನಡದ ನೆಲದಲ್ಲಿ ಜಾತ್ಯಾತೀತ ಅನುಭಾವೀ ಸಾಧಕ ಪರಂಪರೆಯೊಂದು ಇನ್ನು ಜೀವಂತವಾಗಿದೆ. ತತ್ವಪದಕಾರರು, ಮುಟ್ಟು – ಮೈಲಿಗೆ ಎಂಬ ಅನೈಸರ್ಗಿಕ ನಿಲುವನ್ನಾಧರಿಸಿದ ತಾರತಮ್ಯವನ್ನು ನಿರಾಕರಿಸಿದರು. ಆ ಮೂಲಕ ಹೆಣ್ಣನ್ನು ಅವಮಾನಿಸುವ ಆಚರಣೆಗಳನ್ನು ತ್ಯಜಿಸಿದರು. ತತ್ವಪದಕಾರರ ಗದ್ದುಗೆಗಳಲ್ಲಿ ಜಾತಿ, ಧರ್ಮ, ದರ್ಶನಗಳ ಯಾವ ತಡೆಗೋಡೆಗಳೂ ಇಲ್ಲ. ಅಲ್ಲಿ ಎಲ್ಲರೂ ಸಮಾನರು ಮತ್ತು ವಿಶ್ವಮಾನವರು ಇವುಗಳ ಆಚರಣೆ ವಿಧಿ ನಿಷೇಧಗಳು ಮತ್ತು ಯಥೇಚ್ಛವಾಗಿ ದೊರಕುವ ಸಾಹಿತ್ಯವು ಈ ಪಂಥದ ತಾತ್ವಿಕತೆ ಮತ್ತು ಆಶಯವನ್ನು ಅರಿತುಕೊಳ್ಳಲು ಸಹಾಯಕವಾಗಿದೆ.

**KEYWORDS:** ರಾಂಪುರದ ಬಕ್ಕಪ್ಪ, ತತ್ವಪದಗಳ ಆಶಯ, ಲಿಂಗಾಂಗ ಸಾಮರಸ್ಯ, ಶರಣಸತಿ – ಲಿಂಗಪತಿ ಭಾವ, ಜಾನಪದ ಪ್ರತಿಭೆ ಬಕ್ಕಪ್ಪ.

* **ಡಾ. ಮಮತಾ ಧನರಾಜ,** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನಹಳ್ಳಿ, ತಾ. ಜಿ. ಬೀದರ.

**ಪ್ರಸ್ತಾವನೆ:**

ದಾಸರು ಶರಣರಂತೆಯೇ ಜಾತಿ ಸೂಚಕವಿಲ್ಲದ ಮೇಲುಕೀಳಿನ ಹಂಗಿಲ್ಲದ ಜೀವನ ಪರಂಪರೆಯೊಂದು ಅಮೂರ್ತರೂಪದ ಅರಿವೇ ಗುರು ಎಂಬ ತಾತ್ವಿಕ ಎಚ್ಚರದ ತತ್ವಪದಗಳನ್ನು ಹಾಡುತ್ತ, ಹಾಡನ್ನೇ ಬದುಕಾಗಿಸಿಕೊಂಡು ಅನೇಕ ತತ್ವಪದಕಾರರು ಈ ನಾಡಿನ ಚಿಂತನ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಲೌಕಿಕ ಜೀವನದ ಸಂಕೀರ್ಣತೆಯಲ್ಲಿ ಕಳೆದು ಹೋಗುತ್ತಿರುವ ಜನಸಾಮಾನ್ಯರ ಎದೆಯಲ್ಲಿ ಅನುಭಾವಿಕ ಬೆಳೆಯನ್ನು ತತ್ವಪದಗಳ ಮೂಲಕ ಹಿಡಿದಿಟ್ಟು ಪೀಳಿಗೆಯಿಂದ ಪೀಳಿಗೆಗೆ ಜತನದಿಂದ ಕಾಪಾಡಿಕೊಂಡು ಬಂದಿರುವುದು ಬಹಳ ಮುಖ್ಯವಾಗಿದೆ. ತತ್ವಪದಕಾರರ ಪರಂಪರೆಯು ಭಾರತೀಯ ಸಂದರ್ಭದಲ್ಲಿ ಅವೈದಿಕ ಪರಂಪರೆಯ ಒಂದು ಪ್ರಮುಖ ಧಾರೆಯಾಗಿ ಹರಿದು ಬಂದಿದೆ. ತತ್ವಪದಗಳು ಜಾತಿ ಧರ್ಮ, ಪಂಥ, ಭಾಷೆ ಮತ್ತು ಪ್ರಾದೇಶಿಕ ಗಡಿಗಳನ್ನು ಮೀರಿ ಇಪ್ಪತ್ತನೆಯ ಶತಮಾನದಲ್ಲಿ ಮಹಾಕವಿ ಕುವೆಂಪು ಅವರು ಪ್ರಚುರ ಪಡಿಸಿದ ವಿಶ್ವಮಾನವ ಪ್ರಜ್ಞೆಯನ್ನು ನೂರಾರು ವರ್ಷಗಳಿಂದಲೇ ಸಾಕಾರಗೊಳಿಸುತ್ತಾ ಬಂದಿರುವ ಮೌಖಿಕ ಪ್ರಕಾರಗಳಾಗಿವೆ.

ತತ್ವಪದಕಾರರಲ್ಲಿ ಅನೇಕ ಚಿಂತನ ಧಾರೆಗಳಿವೆ. ಸಿದ್ಧ, ನಾಥ, ವಚನ, ಸೂಫಿ ಮುಂತಾದ ಶ್ರಮಣ ಧಾರೆಗಳಿಂದ ಪ್ರಣೀತಗೊಂಡ ತತ್ವ ಚಿಂತನೆಯನ್ನು ನಡೆ ಮತ್ತು ನುಡಿಗಳೆರಡರಲ್ಲೂ ಅನ್ವಯಿಸಿಕೊಂಡು ಬದುಕುತ್ತಿರುವವರು ತತ್ವಪದಕಾರರು. ಜಾತಿ ತಾರತಮ್ಯ, ವರ್ಣವ್ಯವಸ್ಥೆ, ಲಿಂಗಭೇದಗಳನ್ನು ನಿರಾಕರಿಸಿ ಬಾಳುವ ಜೀವನ ಕ್ರಮವೊಂದು ನಮ್ಮ ನಡುವೆ ಇದೆ ಎನ್ನುವುದು ಸರಳ ಸಂಗತಿಯಲ್ಲ.

ತತ್ವಪದವೆಂಬ ಮಾತಿನಲ್ಲೇ ಈ ಪ್ರಕಾರದ ಆಶಯ ಮತ್ತು ಆಕೃತಿಯನ್ನು ಕುರಿತು ವಿವರಣೆಯಿದೆ. ಜೀವನದ ತತ್ವದ ಮೂಲ ವಿಚಾರಗಳನ್ನು ಹಾಡಿನ ರೂಪದಲ್ಲಿ ಹಿಡಿದಿಟ್ಟಿರುವ ರಚನೆಗಳೇ ತತ್ವಪದಗಳು. ಕನ್ನಡ ನಾಡಿನಾದ್ಯಂತ ಈ ಪದಗಳು ಜನಜೀವನದಲ್ಲಿ ಹಾಸು ಹೊಕ್ಕಾಗಿ ಹೋಗಿವೆ. ಸಿನಿಮಾ, ಟಿ.ವಿ. ಮಾಧ್ಯಮಗಳು ಜನಪ್ರಿಯಗೊಳ್ಳುವದಕ್ಕಿಂತ ಮೊದಲೇ ಹಿಂದಿನ ಕಾಲದಲ್ಲಿ ಹಳ್ಳಿ ಹಳ್ಳಿಗಳಲ್ಲಿಯೂ ಭಜನಾ ಮಂಡಳಿಗಳಿದ್ದವು. ಕೋಲಾಟದ ತಂಡಗಳಿದ್ದವು. ಇವರೆಲ್ಲ ಆಶ್ರಯಿಸಿದ್ದು ತತ್ವಪದಗಳನ್ನು. ಇಂದಿಗೂ ಕನ್ನಡ ನಾಡಿನ ಕೆಲವು ಊರಿನಲ್ಲಿ ಗುಡಿ, ಆರಾಧನಾ ಕೇಂದ್ರಗಳಲ್ಲಿ, ಹುಣ್ಣಿಮೆ, ಅಮವಾಸ್ಯೆಗಳಂದು ಗುಂಪಾಗಿ ಸೇರುತ್ತಾರೆ. ತಾತ್ವಿಕ ಚಿಂತನೆ ನಡೆಸುತ್ತಾರೆ. ಭಜನೆ ಮಾಡುತ್ತಾರೆ, ನಾಲ್ಕಾರು ದಿನಗಳು ಒಟ್ಟಿಗೆ ಕಲೆತು ಊಟೋಪಚಾರ, ಗಾಂಜಾ ಸೇವನೆ, ಭಗವತ್ ಚಿಂತನೆ ಸತತವಾಗಿ ನಡೆಯುತ್ತವೆ. ಇಂತಹ ಸಾಧುಗಳು ತಮ್ಮ ತಮ್ಮ ಊರುಗಳಲ್ಲಿ ಆಶ್ರಮ ಕಟ್ಟಿಕೊಂಡು ವಾಸಮಾಡುತ್ತಾರೆ. ಅಲ್ಲಿಯೂ ಆಗಾಗ ಸೇರಿ ಸತ್ಸಂಗ ಗೋಷ್ಠಿ ನಡೆಸುತ್ತಾರೆ. ಇವರಿಗೆ ಜಾತಿಮತಗಳ ಕಟ್ಟಳೆಯಿಲ್ಲ, ಹೆಣ್ಣು ಗಂಡೆಂಬ ಭೇದಭಾವವಿಲ್ಲ, ಇವರೆಲ್ಲ ತತ್ವಪದಗಳನ್ನು ತಂಬೂರಿ ಹಿಡಿದು ಹಾಡುತ್ತಾರೆ. ಕೆಲವರಾದರೂ ಇವರಲ್ಲಿ ತತ್ವಪದ ರಚನಾಕಾರರಿದ್ದಾರೆ. ಹೀಗೆ ಇಂದಿಗೂ ಜೀವಂತವಾಗಿರುವ ಮುಕ್ತ ಧಾರ್ಮಿಕ ಪಂಥವಿದು. ಇದೊಂದು ಜಾತ್ಯಾತೀತ ಪರಂಪರೆಯಾಗಿದೆ.

**ರಾಂಪುರದ ಬಕ್ಕಪ್ಪ:**

ರಾಮಪುರ ಬಕ್ಕಪ್ಪಯ್ಯ ಗುಲಬರ್ಗಾ ಜಿಲ್ಲೆಯ ಹಿರಿಯ ತತ್ವಪದಕಾರ. ಈತನ ತತ್ವಪದಗಳ ಪ್ರಭಾವ ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ ಹಾಗೂ ಕೂಡಲೂರು ಬಸವಲಿಂಗ ಶರಣರ ಮೇಲಾದುದು ಕಂಡುಬರುತ್ತದೆ. ಸಗರ ನಾಡಿನಲ್ಲಿ ಈತನ ತತ್ವಪದಗಳು ಅತ್ಯಂತ ಜನಪ್ರಿಯತೆಯನ್ನು ಪಡೆದಿವೆ. ಈತ ಮೂರು ನೂರಕ್ಕಿಂತಲೂ ಹೆಚ್ಚು ತತ್ವಪದಗಳನ್ನು ಬರೆದಿದ್ದಾನೆಂಬ ಪ್ರತೀತಿ ಇದ್ದರೂ ಸದ್ಯ ನಮಗೆ ಈತನ 55 ತತ್ವಪದಗಳು ಮಾತ್ರ ಲಭ್ಯವಾಗಿವೆ. ರಾಮಪುರ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಭೀಮಾನದಿಯ ದಂಡೆಯ ಮೇಲಿರುವ ಈ ಹಳ್ಳಿಯಲ್ಲಿ ಬಕ್ಕಪ್ಪಯ್ಯನ ಗುಡಿ ಇದೆ. ಆತ ಇಲ್ಲಿ ಬದುಕಿ ಹೋದ ಚಿತ್ರ ಇಲ್ಲಿನ ಕೆಲವು ಸ್ಮಾರಕಗಳ ಮೂಲಕ ಈಗಲೂ ಜೀವಂತವಾಗಿರುವುದನ್ನು ಕಾಣುವೆವು. ಆದರೆ ಈಗ ಆತನ ವಂಶಜರಾಗಲೀ, ಆತನ ತಂದೆ–ತಾಯಿಗಳ ಬಗೆಗಾಗಲೀ ಏನೂ ತಿಳಿದು ಬರದು. “ಬಕ್ಕಪ್ಪಯ್ಯನೊಬ್ಬ ಯೋಗಿ, ಆತ ಊರೂರು ಅಲೆಯುತ್ತ ಬಂದು ರಾಮಪುರದಲ್ಲಿ ನೆಲೆ ನಿಂತಂತಿದೆ. ಬಕ್ಕಪ್ಪ ಆಂಧ್ರಪ್ರದೇಶದ ಶ್ರೀಶೈಲದ ಹತ್ತಿರ ಇರುವ ಆತ್ಮಾಕೂರ ಎಂಬ ಗ್ರಾಮದಲ್ಲಿ ಕ್ರಿ.ಶ. 1610ರಲ್ಲಿ ಜನಿಸಿದನೆಂದೂ, ಅಲ್ಲಿಂದ ಆತ ದೇಶ ಸಂಚಾರ ಹೊರಟು ಗುಲಬರ್ಗಾ ಜಿಲ್ಲೆಯ ರಾಮಪುರಕ್ಕೆ ಬಂದು ನೆಲೆಸಿದನೆಂದೂ ಹೇಳುವರು. ಮುಂದೆ ಜನ ಆತನನ್ನು ರಾಮಪುರದವನೇ ಎಂದು ಕರೆಯ ತೊಡಗಿದಂತಿದೆ. ಆತನಿಗೆ ದೀಕ್ಷೆ ಕೊಟ್ಟವ ಕೊಲ್ಲೂರಿನ ಕೊಟ್ರಪ್ಪಯ್ಯ. ರಾಮಪುರದಲ್ಲಿರುವ ದೇವಾಲಯದಲ್ಲಿ ಈಗಲೂ ಕೊಟ್ರಪ್ಪಯ್ಯನ ಮೂರ್ತಿ ಪೂಜೆಗೊಳ್ಳುತ್ತಲಿದೆ. ರಾಮಪುರದಲ್ಲಿ ಪ್ರತಿ ವರ್ಷ ಚಟ್ಟಿ ಅಮವಾಸ್ಯೆ ಆದ ಮೇಲೆ ಬರುವ ಎರಡನೆಯ ಸೋಮವಾರ ಬಕ್ಕಪ್ಪಯ್ಯನ ಜಾತ್ರೆ ನಡೆಯುತ್ತದೆ.”[1]

“ಬಕ್ಕಪ್ಪಯ್ಯನನ್ನು ಜನ ಬೂದಿ ಬಸವ, ಬಕ್ಕಪ್ಪ, ಬಕ್ಕಪ್ರಭು ಎಂದು ಕರೆದಿದ್ದಾರೆ. ಪ್ರಾಯಶಃ ಬಕ್ಕಪ್ಪಯ್ಯನೆಂಬ ಹೆಸರು ಆತನಿಗೆ ಅನ್ವರ್ಥಕವಾಗಿ ಬಂದಂತಿದೆ. ಬಕ್ಕಪ್ಪ ಎಂದರೆ ಬೋಳು ತಲೆಯವ ಎಂದರ್ಥ. ಕೇಶ ಮುಂಡನ ಮಾಡಿಸಿಕೊಳ್ಳುವುದು ವಿರಕ್ತರ, ಸನ್ಯಾಸಿಗಳ ಲಕ್ಷಣ. ಬಕ್ಕಪ್ಪಯ್ಯನು ಸಂಸಾರದ ಹಂಗು ಹರಿದುಕೊಂಡು ವಿರಕ್ತನಾಗಿರಬೇಕು. “ಬೂದಿ ಬಸವ” ಎಂಬ ಅವನ ಇನ್ನೊಂದು ಹೆಸರಿನ ಔಚಿತ್ಯವನ್ನು ಗಮನಿಸಿದಾಗ ಆತನ ನಿಜನಾಮ ಬಸಪ್ಪ ಎಂದಿರಬಹುದೆನಿಸುತ್ತದೆ. ಇದಕ್ಕೆ ಆಧಾರ ಆತನ ತತ್ವಪದಗಳಲ್ಲೂ ಇದೆ. ಆತ ತನ್ನ ಪದಗಳಲ್ಲಿ ಪದೇ ಪದೇ ತನ್ನನ್ನು ಬೂದಿ ಬಸವನೆಂದು ಕರೆದುಕೊಂಡಿದ್ದಾನೆ. ಈ ಹೆಸರು ಕಾಲಕ್ರಮದಲ್ಲಿ ಜನರ ಬಾಯಿಂದ ದೂರವಾಗಿ ಆತನಿಗಿರುವ ಸಾಂಕೇತಿಕಾರ್ಥದ ಬಕ್ಕಪ್ಪಯ್ಯನೆಂಬ ಹೆಸರೇ ಈಗ ಪ್ರಚಾರದಲ್ಲಿದೆ.”[2]

**ತತ್ವಪದಗಳ ಆಶಯ:**

ಬಕ್ಕಪ್ಪಯ್ಯ ಮುನ್ನೂರಕ್ಕಿಂತಲೂ ಹೆಚ್ಚು ತತ್ವಪದಗಳನ್ನು ಬರೆದಿರುವನೆಂದು

ಜನ ಹೇಳುವರು. ಆದರೆ ಈಗ ಆತನ 55 ತತ್ವಪದಗಳು ಮಾತ್ರ ನಮಗೆ ಸಿಕ್ಕಿವೆ. "ರಾಮಪುರದ ಬಕ್ಕ ಭೀಮಾತೀರದಿ ಸಿಕ್ಕ". "ಸಣ್ಣ ಹಳ್ಳಿ ರಾಮಪುರದ ಬಕ್ಕ ಒಬ್ಬನೇ ಸಿಕ್ಕ" ಎಂಬ ಉಕ್ತಿಗಳು ಆತನ ತತ್ವಪದಗಳಲ್ಲಿ ಪದೇ ಪದೇ ಬಂದಿವೆ. 'ರಾಮಪುರದ ಬಕ್ಕ' ಎಂಬುದು ಈತನ ತತ್ವಪದಗಳ ಅಂಕಿತವಾಗಿದೆ. ಲೌಕಿಕರ ನಿತ್ಯದ ಆಡು ಭಾಷೆ, ಬದುಕಿನ ವಿವರಗಳನ್ನೆಲ್ಲ ತನ್ನ ಹಾಡುಗಳಲ್ಲಿ ಅನಾವರಣಗೊಳಿಸಿದ್ದು ಅನನ್ಯವಾಗಿದೆ. ಬಕ್ಕಪ್ಪಯ್ಯ ಶರಣ ಮಾರ್ಗಾವಲಂಬಿಯಾದ ಒಬ್ಬ ತತ್ವಪದಕಾರನೆನ್ನುವುದು ಆತನ ಪದಗಳಿಂದ ತಿಳಿಯುವುದು. "ಗುರುವಿನ ಕೂಡಿದೇನ ಗೆಳತಿ ಅರುಹಿನ ಮನೆಯಲ್ಲಿ" ಎನ್ನುವ ಆತ ಶಿವನ ಸಾನಿಧ್ಯಕ್ಕಾಗಿ ಪ್ರಾರ್ಥಿಸುವನು. ದೇಹವನ್ನು ಮರೆತು ದೇವನನ್ನು ಅರಿತುಕೊಳ್ಳುವ ಕ್ರಿಯೆಯಲ್ಲಿ ಆತ ನಿರಂತರವಾಗಿ ತೊಡಗಿದುದನ್ನು ಆತನ ಪ್ರಾರ್ಥನೆ, ಗುರುಭಕ್ತಿ ಕುರಿತಿದ್ದ ತತ್ವಪದಗಳಲ್ಲಿ ಕಾಣುವೆವು. ಲಿಂಗ ಪತಿಭಾವ, ಲಿಂಗಾಂಗ ಸಾಮರಸ್ಯದ ಕಲ್ಪನೆ ಹಾಗೂ ಅನುಭಾವ ಆತನ ಕೆಲವು ತತ್ವಪದಗಳಲ್ಲಿ ವ್ಯಕ್ತಗೊಂಡುದುದನ್ನು ಅರಿಯುವೆವು. ಲೌಕಿಕ ರೂಪದ ಪತಿ-ಪತ್ನಿಗಳ ಸರಸ-ವಿರಸ ಮುಂತಾದ ಸಂಬಂಧಗಳನ್ನೆಲ್ಲ ಸಾಮಾನ್ಯ ಜನರಿಗೆ ತಿಳಿಯುವಂತೆ ಸಾಂಕೇತಿಕ ರೂಪದಲ್ಲಿ ತತ್ವಪದ ರಚಿಸಿದ್ದು ಆತನ ಹೆಗ್ಗಳಿಕೆಯಾಗಿದೆ. ಪತಿಯನ್ನಗಲಿ ವಿರಹ ವೇದನೆಯಲ್ಲಿ ಬೇಯುತ್ತಿರುವ ಸತಿಯಳ ಚಿತ್ರವನ್ನು ತನ್ನ ತತ್ವಪದಗಳಲ್ಲಿ ಕಣ್ಣೆ ಕಟ್ಟುವ ಹಾಗೆ ವರ್ಣಿಸಿದ್ದಂಟು. ಭಕ್ತ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದು ಎಲ್ಲ ಧರ್ಮಗಳಲ್ಲೂ ಉಂಟು. ವೀರಶೈವ ಧರ್ಮದಲ್ಲಿ ಶರಣಸತಿ ಲಿಂಗಪತಿ ಭಾವದ ಪರಿಭಾಷೆಯಲ್ಲಿರುವುದು ಒಂದು ವಿಶೇಷವಾಗಿದೆ. ಬಕ್ಕಪ್ಪಯ್ಯ ಆಧ್ಯಾತ್ಮಿಕ ಸ್ಪರ್ಶಕ್ಕಾಗಿ, ಶಿವಸಾನಿಧ್ಯಕ್ಕಾಗಿ ಶರಣ ಸತಿಯಾಗಿ ಹಂಬಲಿಸುವ ಪರಿಯನ್ನು "ಮನ ಸಿಜರೂಪ ಮುನಿದಾನ ಗೆಳತಿ" ಎಂಬ ಆತನ ತತ್ವಪದದಲ್ಲಿ ಕಾಣಬಹುದು.

**"ಮನಸಿಜ ರೂಪ ಮುನಿದಾನ ಗೆಳತಿ**
**ನೆನಸಿದರ ಎದಿ ಭುಗಿಲಂತದ**
**ಕನಸಿನೊಳಗ ಆತ ಕಂಡಾಂಗ ಆಗತದ**
**ಮನಸಿಗೆ ಜರಮುರಿ ಆಗೇದವ್ವ"**[3]

ಎಂದು ಭಯದ ಭಾವದಿಂದ ಪ್ರಾರಂಭಗೊಳ್ಳುವ ಈ ತತ್ವಪದದಲ್ಲಿ ಶರಣ ಸತಿಯ ಮುಗ್ಧತೆ ಲಿಂಗ ಪತಿಯ ಸೊಬಗು ವ್ಯಕ್ತಗೊಂಡಿದೆ.

ಅನನ್ಯವಾದ ಶ್ರದ್ಧೆ, ಭಕ್ತಿಗಳಿಂದ ಮಾತ್ರ ಭಕ್ತ ಭಗವಂತನಾಗಲು, ಮಾನವ ಮಹಂತನಾಗಲು ಸಾಧ್ಯ. ಹೀಗಾಗಲು ಭಕ್ತ ಪಡುವ ಬವಣೆ, ಬಿಡುವ ನಿಟ್ಟುಸಿರು, ಕೊರಗು ವರ್ಣನಾತೀತ. ಬಕ್ಕಪ್ಪಯ್ಯ ಇದನ್ನು ತನ್ನ ಅನೇಕ ತತ್ವಪದಗಳಲ್ಲಿ ವ್ಯಕ್ತಪಡಿಸಿದುದನ್ನು ನೋಡುವೆವು. ಸಾವುತೀನಿ, ಕೆರೆ ಬಾವಿ ಬೀಳತೀನಿ, ಕಾಯದಾಸಿ ಇನ್ನಾರಿಗವ್ವ, ಯಾರಿಗೇಳಲಿ ಯವ್ವಾ, ಎನ್ನ ದುಃಖ ಗಂಡ ಸಿಗಲಿಲ್ಲ ತಕ್ಕ ಸುಮ್ಮಾನ ತಿನ್ನಂದ್ರ ಗುಮ್ಮೆನಂತ ಬರೀದಿ, ಹೆಣ್ಣಿನ ಉಸಿರು ಒಳ್ಳೇದೇನೋ ನನ್ನ ಕಣ್ಣೀರು ಅವನಿಗೆ ಹತ್ತಲವ್ವ - ಇಲ್ಲಿ ಶರಣ ಸತಿಯ ಸಾತ್ವಿಕ ಸಂತಾಪ, ಶಾಪ ಪ್ರಕಟಗೊಂಡಿದೆ. ಶರಣ ಸತಿಯೆನಿಸಿದ ಭಕ್ತ ಲಿಂಗಪತಿಯನ್ನು ಕೂಡಿಕೊಳ್ಳಲು ಪಡುವ ಬವಣೆ ಇಲ್ಲಿ

ವರ್ಣಿತವಾಗಿದೆ.

ಕನ್ನಡದ ಅನೇಕ ತತ್ವಪದಕಾರರಿಗೆ, ಅನುಭಾವಿ ಕವಿಗಳಿಗೆ ಹಾವು ಪ್ರೀತಿಯ ವಿಷಯ. ಬಕ್ಕಪ್ಪಯ್ಯ 'ತನ್ನ' 'ಹಾವು ಕಡಿತ' ಎಂಬ ತತ್ವಪದದಲ್ಲಿ ಸಂಸಾರದಲ್ಲಿ ಮುಳುಗಿದ ಜೀವಾತ್ಮನನ್ನು ಹಾವು ಕಡಿದು ಎಚ್ಚರಗೊಳಿಸಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಅಣಿಗೊಳಿಸಿತು ಎಂಬರ್ಥದಲ್ಲಿ ಪ್ರಯೋಗಿಸಿದುದನ್ನು ಕಾಣುವೆವು.

**"ಹಾಲು ಬಾನವುಂಡು ಹಾಸಿ ನಾ ಮಲಗಿದ್ದೆ**
**ಬಾಲ ಅಲ್ಲಾಡಿಸುತ ಕಾಲ ಕಡಿಂದ ಬಂದು**
**ಹುತ್ತಿನ ಒಳಗಡೆ ಹಾವು ಹುದುಗಿ ಕುಂತು**
**ಸುತ್ತ ಮುತ್ತ ನೋಡಿ ಸಪ್ಪಳಿಲ್ಲದೆ ಬಂದು ಕಡಿತ"**[4]

ದೇಹದಲ್ಲಿರುವ ಅಷ್ಟಮದ, ಅರಿಷಡ್ವರ್ಗ ಹಾಗೂ ಮೂರು ಮಲಗಳು ನಿರ್ಮಲವಾದಾಗಲೇ ಈ ದೇಹ ದೇವನ ನಿಲಯವಾಗುವುದು. ಆಗ ಅದರಲ್ಲಿ ಲಿಂಗ ಕಳೆ ಕಂಗೊಳಿಸುವುದು. ಅಂಗ ಲಿಂಗವಾಗುವುದೆಂದರೆ ಹೀಗೆಯೇ. ಆಗ ಜೀವಾತ್ಮನೇ ಪರಮಾತ್ಮನಾಗುವನು. ಬಕ್ಕಪ್ಪಯ್ಯನು ಈ ಹಂತ ತಲುಪಿ ರಾರಾಜಿಸಿದಾಗ ಹಾಡಿದ ತತ್ವಪದವೊಂದು ಹೀಗಿದೆ.

**"ತನ್ನೊಳು ತಾ ತಿಳಿದನ**
**ಮೇಲು ಸೀಮೆಗೆ ಒಯ್ದನ**
**ನಿಜಗುರು ನಿಜ ಮಾಟ ರಾಜ ದಿಗಂಬರ**
**ಬಕ್ಕಪ್ಪನ ಕೂಡಿಕೊಂಡೆನ"**[5]

ಇಲ್ಲಿ ಬಕ್ಕಪ್ಪಯ್ಯ ತಲುಪಿದ ಆನುಭಾವಿಕ ನಿಲುವಿನ ಪರಿಚಯವಾಗುವುದು. ಆತ ಲೌಕಿಕದೊಂದಿಗಿದ್ದೂ ಅಲೌಕಿಕ ಸಾಧನೆಯನ್ನು ಮಾಡಿದ ಮಹಾತ್ಮನೆನ್ನುವುದು ವಿದಿತವಾಗುವುದು.

ವ್ಯಕ್ತಿ ತನ್ನ ಅಂತರಂಗವನ್ನಷ್ಟೇ ಶುದ್ಧಿ ಮಾಡಿಕೊಂಡರೆ ಆಗದು. ಅಂತರಂಗದ ಅರಿವಿನೊಡನೆ ಬಹಿರಂಗದ ಅರಿವನ್ನೂ ಆತ ಕರಗತ ಮಾಡಿಕೊಳ್ಳಬೇಕು. ಆಗ ಆತನ ಇಹದ ಬದುಕು ಅರ್ಥಪೂರ್ಣವಾಗುವುದು. ರಾಮಪುರ ಬಕ್ಕಪ್ಪಯ್ಯನು ತನ್ನ ಸುತ್ತಣ ಜನತೆಯಲ್ಲಿ ಮನೆ ಮಾಡಿಕೊಂಡಿರುವ ಅಜ್ಞಾನ, ಅಸಮಾನತೆ, ಜಾತಿ ಭೇದ – ಮುಂತಾದ ಸಾಮಾಜಿಕ ಅನಿಷ್ಟಗಳನ್ನು ತನ್ನ ಅನೇಕ ತತ್ವಪದಗಳಲ್ಲಿ ಖಂಡಿಸಿದ್ದಾನೆ. ಸಾಮಾಜಿಕ ಪ್ರಜ್ಞೆ, ಕಳಕಳಿ ಆತನ ತತ್ವಪದಗಳಲ್ಲಿ ತೀವ್ರವಾಗಿ ಕಾಣಿಸಿಕೊಂಡುದುದನ್ನು ಅರಿಯುವೆವು. – ಅಂತರಂಗ – ಬಹಿರಂಗ ಎರಡೂ ಒಂದೇ ಆಗಿರಬೇಕು. ಅಂತರಂಗದಲ್ಲೊಂದು – ಬಹಿರಂಗದಲ್ಲೊಂದು ರೀತಿ ನಡೆದುಕೊಳ್ಳುವ ಜನರನ್ನು ಕಂಡು ಬಕ್ಕಪ್ಪ ವಿಡಂಬಿಸಿ ಅವರಿಗೆ ನೀತಿ ಬೋಧೆ ಮಾಡಿದ್ದಾನೆ.

ಜನತೆಯ ಅಜ್ಞಾನ, ಮಾತು – ಕೃತಿಗಳಲ್ಲಿರುವ ಅಂತರವನ್ನು ಎತ್ತಿ ಹೇಳಿ

ಇಲ್ಲಿ ಬಕ್ಕಪ್ಪಯ್ಯ ವಿಡಂಬಿಸಿದುದು ಔಚಿತ್ಯಪೂರ್ಣವಾಗಿದೆ. ಕುಂಬಳ ಹೂವು ಹೂವಲ್ಲ, ಹಾಗಲಕಾಯಿ ಕಾಯಿ ಅಲ್ಲ, ಕುಂಬಾರತಿ, ಹಾರುತಿ, ಒಡ್ಡತಿ ಇವರ ಮಾತಿಗೆ ಅರ್ಥವಿಲ್ಲ. ಕುಂಬಿ ಮೇಲೆ ನಿಂತು ನಗುವ ಹೆಂಗಸು, ಹಣೆಯ ಮೇಲೆ ಕುಂಕುಮ ಇಲ್ಲದ ಹೆಂಗಸು ಆತನ ದೃಷ್ಟಿಯಲ್ಲಿ ಹೆಣ್ಣೆ ಅಲ್ಲ. ಬಡ್ಡಿ ತಿನ್ನುವವನ ಮಾತು ನಿಜವೇ ಅಲ್ಲ ಎನ್ನುವ ಆತನ ಮಾತಿನಲ್ಲಂತೂ ಲೋಕಾನುಭವ ಹಾಗೂ ಸೂಕ್ಷ್ಮ ಸಮಾಜ ವಿಡಂಬನೆ ಪರಿಣಾಮಕಾರಿಯಾಗಿ ವ್ಯಕ್ತಗೊಂಡುದುದನ್ನು ಕಾಣುವೆವು. ಸಮಾನತೆಯ ಹಾಗೂ ನೀತಿಯ ನೆಲೆಗಟ್ಟಿನ ಮೇಲೆ ಸಮಾಜ ನಿರ್ಮಾಣವಾಗಬೇಕೆಂಬುದು ಬಕ್ಕಪ್ಪಯ್ಯನ ತತ್ವಪದಗಳ ಧ್ಯೇಯವಾಗಿದೆ. ಸಂಸಾರ ತ್ಯಾಜ್ಯವಲ್ಲ. ಗಂಡ ಹೆಂಡತಿಯರು ಲೌಕಿಕ ಜೀವನ ಸಾಗಿಸುತ್ತಲೇ ಪಾರಮಾರ್ಥ ಸಾಧಿಸಿಕೊಳ್ಳಬೇಕೆನ್ನುವುದು ಬಕ್ಕಪ್ಪಯ್ಯನ ತತ್ವಪದಗಳ ಸಂದೇಶವಾಗಿದೆ.

## ಅಡಿ ಟಿಪ್ಪಣಿಗಳು:

1. ಪೂಜಾರ ವಿ.ಜಿ., (2012), ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವದಕಾರರ ಸ್ಮಾರಕಗಳ, ಕಲಬುರಗಿ: ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಪು.ಸಂ. 1
2. ಅದೇ, ಪು.ಸಂ. 1 ಮತ್ತು 2.
3. ಅದೇ, ಪು.ಸಂ. 3.
4. ಅದೇ, ಪು.ಸಂ. 4.
5. ಅದೇ, ಪು.ಸಂ. 5.

## ಪರಾಮರ್ಶನ ಗ್ರಂಥಗಳು:


1. ಪೂಜಾರ ವಿ.ಜಿ., (2012), ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ತತ್ವಪದಕಾರರ ಸ್ಮಾರಕಗಳು, ಕಲಬುರಗಿ: ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ.
2. ಬಸವರಾಜ ಸಬರದ (ಸಂ.), (2008), ಹೈದ್ರಾಬಾದ ಕರ್ನಾಟಕ ತತ್ವಪದಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ರಹಮತ್ ತರೀಕೆರೆ ಮತ್ತು ಡಾ. ಅರುಣ ಜೋಳದ ಗುಡಲಗಿ (ಸಂ.), (2011), ತತ್ವಪದ ಪ್ರವೇಶಿಕೆ (ಸಂಪುಟ–1), ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.
4. ಅಮರೇಶ ನುಗಡೋಣಿ (ಸಂ.), (2011), ತತ್ವಪದ ಸಾಹಿತ್ಯ ಅಧ್ಯಯನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.